
## ಕತೆ ಕೇಳಿದರೆ ಸಾಲದು

ಪ್ಯಾಲಸ್ತೇನ್‌ನ ಇಬ್ಬರು ಯುವಕರಿಗೆ ಕನಸುಗಳಿಗೆ ಕೊರೆಯಿಲ್ಲ. ಗ್ಯಾರೇಜ್‌ನಲ್ಲಿ ಕೆಲಸ ಮಾಡುವ ಅವರು ಆಪ್ತ ಸ್ನೇಹಿತರು. ಒಬ್ಬ ಸೈಯದ್, ಮತ್ತೊಬ್ಬ ಖಲೀದ್; ಬಾಲ್ಯದ ಗೆಳೆಯರು. ಇಬ್ಬರೂ ಟೆಲ್ ಅವಿವ್ ಎಂಬಲ್ಲಿ ಕಾರ್ಯಾಚರಣೆ ಮಾಡಲು ಮಾನವ ಬಾಂಬ್‌ಗಳಾಗಲು ಒಪ್ಪುತ್ತಾರೆ. ಅವರಿಬ್ಬರ ಬದುಕಿನ ಕೊನೆಯದ್ದೂ ಆಗಿರಬಹುದಾದ 24 ಗಂಟೆಗಳಲ್ಲಿ ನಡೆಯುವ ಸಣ್ಣ ಸಣ್ಣ ಸಂಗತಿಗಳನ್ನು ಸಿನಿಮಾ ಒಳಗೊಂಡಿದೆ. ಹಾಗೆಂದು ಇದನ್ನು ಕಥಾನಕಗಳ ಗುಚ್ಛ ಎಂದಷ್ಟೇ ಕರೆಯಲಾಗದು. ಸಮಾಜೋ ರಾಜಕೀಯ ಸೂಕ್ಷ್ಮಗಳನ್ನು

## ಪಟ್ಟ ಕಷ್ಟಗಳು

'ಪ್ಯಾರಡೈಸ್ ನೌ' ಸಿನಿಮಾಗೆ ಚಿತ್ರಕತೆ ಬರೆದಿದ್ದು ಐದು ವರ್ಷ. ಒಂದೇ ಮುಖ್ಯಪಾತ್ರ ಇದ್ದ ಕತೆ ಬದಲಾಗುತ್ತಾ ಹೋಗಿ, ಹೊಸ ರೂಪು ತಳೆಯಿತು. ಪದೇ ಪದೇ ತಿದ್ದಿ, ತಂಡ ಸೂಕ್ಷ್ಮ ಅಂಶಗಳ ಕಡೆ ನಿಗಾ ವಹಿಸಿತು. ರಾಜಕೀಯ ಸೂಕ್ಷ್ಮವೊಂದನ್ನು ಕಲಾತ್ಮಕವಾಗಿ ಹೇಳುವುದು ತನ್ನ ಉದ್ದೇಶವಾಗಿತ್ತು ಎಂದು ನಿರ್ದೇಶಕ ಹ್ಯಾನಿ ಅಬುಅಸಾದ್ ಹೇಳಿದ್ದಾರೆ. ಗಡಿಭಾಗದಲ್ಲಿಯೇ ಚಿತ್ರೀಕರಣ ನಡೆಸುವ ಮೂಲಕ ತಂಡ ಅಪಾಯಗಳನ್ನು ಮೈಮೇಲೆ ಎಳೆದುಕೊಂಡಿತು. ಸೆಟ್ ಹಾಕಿದ್ದ 300 ಮೀಟರ್ ದೂರದಲ್ಲಿ ನೆಲಬಾಂಬ್ ಸ್ಫೋಟಗೊಂಡಿತು. ನ್ಯಾಬ್ಲಸ್ ನಲ್ಲಿ ಚಿತ್ರೀಕರಣ ನಡೆಸುತ್ತಿದ್ದ ಸಂದರ್ಭದಲ್ಲಿ ಒಂದು ದಿನ ಇಸ್ರೇಲಿ ಹೆಲಿಕಾಪ್ಟರ್‌ನಿಂದ ಕ್ಷಿಪಣಿ ದಾಳಿಯಾಯಿತು. ಚಿತ್ರೀಕರಣದ ಸ್ಥಳದಿಂದ ಅನತಿ ದೂರದಲ್ಲಿದ್ದ ಕಾರು ಸ್ಫೋಟಗೊಂಡಿತು. ಇದನ್ನು ಕಂಡು ದಿಗ್ಭ್ರಮೆಗೆ ಒಳಗಾದ ಚಿತ್ರತಂಡ ಅನಿರ್ದಿಷ್ಟಾವಧಿ ಚಿತ್ರೀಕರಣ ಮುಂದೂಡಿತು. ಇನ್ನೊಮ್ಮೆ ಚಿತ್ರತಂಡದ ವ್ಯವಸ್ಥಾಪಕನನ್ನು ಪ್ಯಾಲಸ್ತೇನ್‌ನ ದುಷ್ಕರ್ಮಿಗಳು ಅಪಹರಿಸಿದರು. ಪ್ಯಾಲಸ್ತೇನ್‌ನ ಅಧ್ಯಕ್ಷರಾಗಿದ್ದ ಯಾಸಿರ್ ಅರಾಫತ್ ಕಚೇರಿಯ ಅಧಿಕಾರಿಗಳು ಸಂಧಾನ ನಡೆಸುವವರೆಗೆ ವ್ಯವಸ್ಥಾಪಕನ ಬಿಡುಗಡೆಯಾಗಲಿಲ್ಲ.



ಶ್ರೇಷ್ಠ ವಿದೇಶಿ ಚಿತ್ರ ಗೋಲ್ಡನ್ ಗ್ಲೋಬ್ ಪ್ರಶಸ್ತಿಯು ಈ ಚಿತ್ರಕ್ಕೆ ಸಂದಿತು. ಆಗ ಭಾವುಕರಾಗಿ ಮಾತನಾಡಿದ ಹ್ಯಾನಿ ಅಬುಅಸಾದ್, 'ನಿಜ, ಈ ಸಿನಿಮಾ ನನ್ನ ಬಹುಕಾಲದ ಕನಸಾಗಿತ್ತು. ಪ್ಯಾಲಸ್ತೇನೀಯನಾಗಿ ಮೂಲ ಸಮಸ್ಯೆಯನ್ನು ಮನವರಿಕೆ ಮಾಡಿಸಬೇಕಿತ್ತು. ನ್ಯಾಯ ಕೇಳುವುದು ಎಲ್ಲರ ಹಕ್ಕೇ ಹೌದು. ಅದನ್ನು ನನ್ನ ಮಾರ್ಗದಲ್ಲಿ ಮಾಡಿದೆ. ಇಂತಹದೊಂದು ಸಿನಿಮಾವನ್ನು ಮತ್ತೆ ಮಾಡಲಾರೆ. ಬದುಕನ್ನು ಸಂಕಷ್ಟಕ್ಕೆ ದೂಡಿ, ಜೀವನ್ಮರಣದ ಹೋರಾಟ ನಡೆಸಿ ಸಿನಿಮಾ ಯಾಕೆ ಮಾಡಬೇಕು ಎಂದು ಈಗ ಅನಿಸುತ್ತಿದೆ' ಎಂದಿದ್ದರು.